1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

Spl.C.73/2019

ದಿಃ 25.01.2024
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-23 Pw-9

| | | |
|---|---|---|
| ಹೆಸರು | ಃ | ತೇಜಸ್ವಿನಿ |
| ಗಂಡನ ಹೆಸರು | ಃ | ಯೋಗೇಂದ್ರಕುಮಾರ್ |
| ವಯಸ್ಸು | ಃ | 23 ವರ್ಷ |
| ಉದ್ಯೋಗ | ಃ | ಗೃಹಿಣಿ |
| ವಾಸಸ್ಥಳ | ಃ | ಕನಕಪುರ ಟೌನ್ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. 4ನೇ ಆರೋಪಿ ನಾಗೇಶ ನನ್ನ ತಂದೆ.

2. 2ನೇ ಮತ್ತು 5ನೇ ಆರೋಪಿತರು ನನ್ನ ಸೋದರ ಮಾವಂದಿರು.

3. 1ನೇ ಆರೋಪಿ ನನ್ನ ಅಣ್ಣ.

4. ಈಗ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ನಂಬರ್ 3, 6 ಮತು 7 ಯಾರು ಎಂಬುದು ಗೊತ್ತಿಲ್ಲ.

5. ನನ್ನ ತಾಯಿ ಮಾನಗಲ್ಲು ಗ್ರಾಮದವಳು.

6. ಮೃತ ರವಿ ತಂದೆ ಮುನಿಯಪ್ಪ ನನ್ನ ತಾಯಿಯ ಊರಿನವನಾಗಿದ್ದು ನನಗೆ ಗೊತ್ತು.

7. ಆದರೆ, ಆತನಿಗೂ ಮತ್ತು ನನಗೂ ಯಾವುದೇ ವೈಯ್ಯಕ್ತಿಕವಾಗಿ ಪರಿಚಯವಿರಲಿಲ್ಲ.

8. ಆತನಿಗೂ ಮತ್ತು ನನಗೂ ಯಾವುದೇ ಸಂಬಂಧ ಇರಲಿಲ್ಲ.

9. ಈ ಪ್ರಕರಣದಲ್ಲಿ ನನಗೇನೂ ಮಾಹಿತಿ ಇರುವುದಿಲ್ಲ.

10. ಪೊಲೀಸರು ನನ್ನನ್ನು ಯಾವ ಕಾಲಕ್ಕೂ ಯಾವುದೇ ರೀತಿಯಲ್ಲಿ ವಿಚಾರಣೆ ಮಾಡಿರುವುದಿಲ್ಲ ಮತ್ತು ನನ್ನಿಂದ ಯಾವುದೇ ಹೇಳಿಕೆಗಳನ್ನು ದಾಖಲಿಸಿಕೊಂಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)**

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

11. ಈಗ ನನಗೆ 15 ತಿಂಗಳುಗಳ ಹಿಂದೆ ವಿವಾಹವಾಗಿರುತ್ತದೆ ಎನ್ನುವುದು ಸರಿ.

12. ಈಗ ನನಗೆ ಓದಿ ಹೇಳಿದ ನಿ.ಪಿ.9ರಂತೆ "ನಮ್ಮ ತಂದೆ ತಾಯಿಗೆ ಇಬ್ಬರು ಮಕ್ಕಳಿದ್ದು, ಮೊದಲನೆಯವಳು ನಾನು ಹಾಗೂ ಎರಡನೇ ನನ್ನ ತಮ್ಮ ಆಕಾಶ್‌ರವರಾಗಿರುತ್ತೇವೆ, ನಾನು ಈಗ ದ್ವಿತೀಯ

.......................................

.......................................

........................................

........................................

ಸೇರಿ ಮಾರಕಾಸ್ತ್ರಗಳಿಂದ ರವಿಗೆ ಹೊಡೆದು ಕೊಲೆ ಮಾಡಿ ಬಿಳಗುಂಬದ ಸೇತುವೆ ಕೆಳಗೆ ಎಸೆದಿರುತ್ತಾರೆಂದು ವಿಚಾರ ತಿಳಿಯಿತು" ಎಂದು ದಿಃ02.07.2019 ರಂದು ಪೊಲೀಸರ ಮುಂದೆ ನಾನು ಹೇಳಿಕೆ ನೀಡಿರುತ್ತೇನೆಂದು ಸೂಚಿಸುವುದು ಸರಿಯಲ್ಲ.

13. 4 ನೇ ಆರೋಪಿ ನನ್ನ ತಂದೆಯಾಗಿರುವುದರಿಂದ, ಮತ್ತು ಇತರ ಆರೋಪಿತರು ನನ್ನ ಸಂಬಂಧಿಕರಾಗಿರುವುದರಿಂದ, ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪಾಟೀ ಸವಾಲುಃ ಶ್ರೀ. ಹೆಚ್.ಎಸ್.ಪಿ., ವಕೀಲರಿಂದ 1, 4 ಮತ್ತು 5 ನೇ ಆರೋಪಿಗಳ ಪರವಾಗಿಃ ಏನೂ ಇಲ್ಲವೆಂದು ತಿಳಿಸಿರುತ್ತಾರೆ.

ಪಾಟೀ ಸವಾಲುಃ ಶ್ರೀ. ಟಿ.ಜಿ., ವಕೀಲರಿಂದ 2 ಮತ್ತು 3 ನೇ ಆರೋಪಿಗಳ ಪರವಾಗಿಃ ಏನೂ ಇಲ್ಲವೆಂದು ತಿಳಿಸಿರುತ್ತಾರೆ.

ಪಾಟೀ ಸವಾಲುಃ ಶ್ರೀ. ಎಲ್.ಕೆ.ಎನ್., ವಕೀಲರಿಂದ 6 ನೇ ಆರೋಪಿಯ ಪರವಾಗಿಃ ಏನೂ ಇಲ್ಲವೆಂದು ತಿಳಿಸಿರುತ್ತಾರೆ.

ಪಾಟೀ ಸವಾಲುಃ ಶ್ರೀ. ಎಂ.ಎ.ಕೆ., ವಕೀಲರಿಂದ 7 ನೇ ಆರೋಪಿಯ ಪರವಾಗಿಃ ಏನೂ ಇಲ್ಲವೆಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.